ಈ) ರಾಜ್ಯದಲ್ಲಿರುವ ಎಲಾ ಮಹಾನಗರ ಪಾಲಿಕೆಗಳು/ನಗರಸಭೆಗಳಲ್ಲಿ ಕಳೆದ 3 ವರ್ಷಗಳಲ್ಲಿ ಈ ಯೋಜನೆಗೆ ಒಟ್ಟು ರೂ 433 34 ಲಕ್ಷಗಳನ್ನು ನಿಗದಿಪಡಿಸಿದ್ದು, ಇದರಲ್ಲಿ ರೂ 403 77 ಲಕ್ಷಗಳನ್ನು ಖರ್ಚು ಮಾಡಲಾಗಿದೆ

ಉ) ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ಆಸ್ಪತ್ರೆಗಳಲ್ಲಿ ಆ್ಯಂಟಿ ರೇಬೀಸ್ ಲಸಿಕೆ ಸದಾ ಉಚಿತವಾಗಿ ಲಭ್ಯವಿರುತ್ತದೆ ತುರ್ತು ಸಂದರ್ಭಗಳಲ್ಲಿ ಆಸ್ಪತ್ರೆಗಳಲ್ಲಿ ಲಸಿಕೆ ಮುಗಿದು ಹೋದರೆ ವೈದ್ಯರೇ ಸ್ಥಳಿಯವಾಗಿ ರೂ 10,000–00 ವರೆಗೆ ಖರೀದಿಸಲು ಅವಕಾಶ ವಿರುತ್ತದೆ ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ರೇಬೀಸ್ ನಿರೋಧಕ ಚುಚ್ಚುಮದ್ದಿನ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದೆ

321 ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜನಗರ) ಮಾನ್ಯ ಗೃಹ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ದೇವಯ್ಯ ಭವನದಲ್ಲಿರುವ ಸಬ್ ಏರಿಯಾ ಸಿ ಎಸ್ ಡಿ ಕ್ಯಾಂಟೀನನ್ನು ಮುಂದುವರೆಸುವಂತೆ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳ ಮಾಜಿ ಸೈನಿಕರು ನೀಡಿದ ಮನವಿಯ ಬಗ್ಗೆ ಸರ್ಕಾರ ಯಾವ ಕ್ರಮ ವಹಿಸಿದೆ,

ಆ) ಮೈಸೂರಿನ ದೇವಯ್ಯ ಭವನದ ಪಕ್ಕದಲ್ಲಿರುವ ಖಾಲಿ ಜಾಗದಲ್ಲಿ ECHS ಅಧಿಕಾರ ವರ್ಗದವರು ಖಾಯಂ ಪಾಲಿಕ್ಲಿನಿಕ್ ನಿರ್ಮಿಸಲು ಅನುಮತಿ ಕೋರಿದ್ದು ಈ ಮಾಜಿ ಸೈನಿಕರು ಸಲ್ಲಿಸಿರುವ ಮನವಿ ಬಗ್ಗೆ ಸರ್ಕಾರದ ನಿಲುವೇನು ,

ಇ) ನಿವೃತ್ತ ಯೋಧರ ಕಲ್ಯಾಣಕ್ಕಾಗಿ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ಹಾಗೂ ಕೈಗೊಳ್ಳುತ್ತಿದೆ ?

ಮಾನ್ಯ ಗೃಹ ಮಂತ್ರಿಗಳು :

ಅ) ಈ ಹಿಂದೆ ಕರ್ನಾಟಕ ಮತ್ತು ಕೇರಳ ಸಬ್ ಏರಿಯಾದವರು ಮೈಸೂರಿನ ಸ್ಕ್ವಾಡ್ರನ್ ಲೀಡರ್ ಎ ಬಿ ದೇವಯ್ಯ ಭವನದಲ್ಲಿ ಮಾಜಿ ಸೈನಿಕರ ಮತ್ತು ಅವರ ಅವಲಂಬಿತರಿಗೆ ವೈದ್ಯಕೀಯ ಅನುಕೂಲಕ್ಕಾಗಿ ಒಂದು ಪಾಲಿಕ್ಲಿನಿಕ್ ಮತ್ತು ಸಿ ಎಸ್ ಡಿ ಕ್ಯಾಂಟೀನನ್ನು ಸ್ಥಾಪಿಸಲು ಸರ್ಕಾರಕ್ಕೆ ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ ಸರ್ಕಾರವು ಆದೇಶ ಸಂಖ್ಯೆ ಒಇ 70 ಕಸೈಸೇ 2003, ದಿನಾಂಕ 15 4 2004 ರಲ್ಲಿ ಸದರಿ ಪಾಲಿಕ್ಲಿನಿಕ್ ಮತ್ತು ಸಿ ಎಸ್ ಡಿ ಕ್ಯಾಂಟೀನನ್ನು ಪ್ರತ್ಯೇಕವಾದ ಸೂಕ್ತ ಸ್ಥಳ ದೊರೆಯುವವರೆಗೆ ಮೈಸೂರಿನ ಸ್ಕ್ವಾಡ್ರನ್ ಲೀಡರ್ ಎ ಬಿ ದೇವಯ್ಯ ಭವನದ ಕಟ್ಟಡದಲ್ಲಿ ತಾತ್ಕಾಲಿಕವಾಗಿ

ಎರಡು ವರ್ಷಗಳ ಮಟ್ಟಿಗೆ ತೆರೆಯಲು ಅವಕಾಶ ಕಲ್ಪಿಸಿ ಆದೇಶಿಸಿರುತ್ತದೆ ಸದರಿ ಅವಧಿಯು ಮುಗಿಯುವ ಮುನ್ನ ಕರ್ನಾಟಕ ಮತ್ತು ಕೇರಳ ಸಬ್ ಏರಿಯಾದವರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಅವರ ಪತ್ರ ಸಂ 19903/8/ಕ್ಯೂ 1/(ಪಿ ಸಿ) ದಿನಾಂಕ 28 1 2006 ರಲ್ಲಿ ಸದರಿ ಸಿ ಎಸ್ ಡಿ ಕ್ಯಾಂಟೀನ್ ಮತ್ತು ಪಾಲಿಕ್ಲಿನಿಕ್ ಸುಸೂತ್ರವಾಗಿ ನಡೆಯುತ್ತಿರುವುದಾಗಿ ತಿಳಿಸಿ, ಗುತ್ತಿಗೆ ಆಧಾರದ ಮೇಲೆ ನೀಡಿರುವ ಸ್ಥಳಾವಕಾಶವನ್ನು ಮುಂದಿನ 5 ವರ್ಷದವರೆಗೆ ವಿಸ್ತರಿಸುವಂತೆ ಕೋರಿರುತ್ತಾರೆ

ಈ ಮಧ್ಯೆ ಸದರಿ ಸಿ ಎಸ್ ಡಿ ಕ್ಯಾಂಟೀನ್ ಹಾಗೂ ಪಾಲಿಕ್ಲಿನಿಕ್‌ನ್ನು ಮುಂದುವರೆಸುವ ಬಗ್ಗೆ ವಿವಿಧ ಮಾಜಿ ಸೈನಿಕರ ಸಂಘ ಸಂಸ್ಥೆಗಳು ಈ ವಿಷಯದಲ್ಲಿ ಸಾಕಷ್ಟು ಪರ/ವಿರೋಧ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತವೆ ಈ ಹಿನ್ನೆಲೆಯಲ್ಲಿ ಸರ್ಕಾರವು ಆದೇಶ ಸಂಖ್ಯೆ ಒಇ 18 ಕಸೈಸೇ 2006, ದಿನಾಂಕ 12 6 2006ರಲ್ಲಿ ಸದರಿ ಅವಧಿಯನ್ನು ತಾತ್ಕಾಲಿಕವಾಗಿ ಒಂದು ವರ್ಷದವರೆಗೆ ಮಾತ್ರ ವಿಸ್ತರಿಸಿರುತ್ತದೆ

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಅಂತಿಮಗೊಳಿಸುವ ನಿಟ್ಟಿನಲ್ಲಿ ಇದರ ಸಾಧಕ–ಬಾಧಕಗಳನ್ನು ಪರಿಶೀಲಿಸಿ ಶೀಘ್ರವೇ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು

ಆ) ಮೈಸೂರಿನ ಸ್ಕ್ವಾಡ್ರನ್ ಲೀಡರ್ ಎ ಬಿ ದೇವಯ್ಯ ಭವನದ ಪಕ್ಕದಲ್ಲಿ ಖಾಲಿ ಜಾಗವಿದ್ದು ಅದರಲ್ಲಿ ಇಲಾಖಾ ವತಿಯಿಂದ ಮಾಜಿ ಸೈನಿಕರ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ತಂಗಲು ಒಂದು ಮಿಲಿಟರಿ ಬಾಲಕರ ವಸತಿ ನಿಲಯವನ್ನು ಸ್ಥಾಪಿಸುವ ಯೋಜನೆ ಇರುತ್ತದೆ

ಇ ಸಿ ಹೆಚ್ ಎಸ್ (ಮಾಜಿ ಸೈನಿಕರ ಅಂಶದಾಯೀ ಆರೋಗ್ಯ ಯೋಜನೆ) ಒಂದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಸದರಿ ಯೋಜನೆಯಡಿಯಲ್ಲಿ ಪಾಲಿಕ್ಲಿನಿಕ್ ಅನ್ನು ಸ್ಥಾಪಿಸಲು ಮೇಲೆ ತಿಳಿಸಿರುವ ಜಾಗವನ್ನು ಒದಗಿಸಲು ಸಂಬಂಧಪಟ್ಟ ಪ್ರಾಧಿಕಾರದಿಂದ ಬೇಡಿಕೆ ಇರುತ್ತದೆ ಮಾಜಿ ಸೈನಿಕರ ಹಿತದೃಷ್ಟಿಯಿಂದ ಈ ಎರಡೂ ಯೋಜನೆಗಳನ್ನು ಪರಿಶೀಲಿಸಿ ಲಭ್ಯವಿರುವ ಸ್ಥಳದಲ್ಲಿ ಸ್ಥಾಪಿಸಬಹುದೇ ಎಂಬ ವಿಷಯವನ್ನು ಇದರ ಸಾಧಕ–ಬಾಧಕಗಳನ್ನು ಪರಿಶೀಲಿಸಿ ಶೀಘ್ರವೇ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು

ಇ) ನಿವೃತ್ತ ಯೋಧರ ಕಲ್ಯಾಣಕ್ಕಾಗಿ ಸರ್ಕಾರ ಈ ಕೆಳಗೆ ನಮೂದಿಸಿದ ಕ್ರಮಗಳನ್ನು ಕೈಗೊಂಡಿದೆ ಹಾಗೂ ಕೈಗೊಳ್ಳುತ್ತಿದೆ

1 ಉದ್ಯೋಗ ಮೀಸಲಾತಿ ಮತ್ತು ಸ್ವ ಉದ್ಯೋಗ

2 ವಯೋಮಿತಿ ಸಡಿಲಿಕೆ ಹಾಗೂ ಶುಲ್ಕ ವಿನಾಯಿತಿ, ವೇತನ ನಿಗದಿ

3 ತಾಂತ್ರಿಕ ಶಿಕ್ಷಣದಲ್ಲಿ ಮಾಜಿ ಸೈನಿಕರ ಮಕ್ಕಳಿಗೆ ಸೀಟುಗಳನ್ನು ಕಾಯ್ದಿರಿಸುವುದು

4 ವೈದ್ಯಕೀಯ ಸವಲತ್ತು

5 ಭೂ ಮಂಜೂರಾತಿ

6 ಯುದ್ಧದಲ್ಲಿ ಮಡಿದ ಯೋಧರ ಅವಲಂಬಿತರಿಗೆ ಅನುಗ್ರಹ ಪೂರ್ವಕ ಅನುದಾನ, ಜಮೀನು ಅಥವಾ ಅದರ ಬದಲಾಗಿ ನಗದು ಅನುದಾನ ಮತ್ತು ಉಚಿತ ಗೃಹ ನಿರ್ಮಾಣ

7 ಭೂ ಸುಧಾರಣೆ ಮತ್ತು ಬಾಡಿಗೆ ನಿಯಂತ್ರಣ ಕಾಯ್ದೆಯಲ್ಲಿ ವಿಶೇಷ ಆದ್ಯತೆ

8 ಶೌರ್ಯ ಹಾಗೂ ಶೌರ್ಯೇತರ ಪ್ರಶಸ್ತಿ ವಿಜೇತರಿಗೆ ನಗದು ಅನುದಾನ

9 ಎರಡನೇ ಮಹಾಯುದ್ಧದಲ್ಲಿ ಭಾಗವಹಿಸಿ ನಿವೃತ್ತಿ ವೇತನ ಪಡೆಯದೆ ಬಿಡುಗಡೆಯಾದ ಯೋಧರಿಗೆ ಮತ್ತು ಅವರ ವಿಧವೆಯರಿಗೆ ಮಾಸಿಕ ರೂ 1000/–ಗೌರವಧನ

10 1977ರ ಮುಂಚಿನ ಸಮರಗಳಲ್ಲಿ ಹುತಾತ್ಮರಾದ ಯೋಧರ ಪತ್ನಿಯರಿಗೆ ರೂ 500/– ಮಾಸಿಕ ಗೌರವಧನ

11 ಯುದ್ಧ ಪ್ರಶಸ್ತಿ

12 ಸರ್ಕಾರಿ ಸ್ವಾಮ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳನ್ವಯ ಮತ್ತು ಕರ್ನಾಟಕ ಗೃಹ ಮಂಡಳಿಯಲ್ಲಿ ಯೋಧರಿಗೆ ಮತ್ತು ಮಾಜಿ ಸೈನಿಕರಿಗೆ ಶೇಕಡಾ 10ರಷ್ಟು ನಿವೇಶನ/ಗೃಹಗಳನ್ನು ಮಂಜೂರಾತಿಯಲ್ಲಿ ಕಾಯ್ದಿರಿಸಿದೆ

13 ಮಾಜಿ ಸೈನಿಕರಿಗೆ ಭೂ ಮಂಜೂರಾತಿ ಮಾಡಲು ಆದಾಯ ಮಿತಿಯನ್ನು ರೂ 2 ಲಕ್ಷಗಳಿಗೆ ಹೆಚ್ಚಿಸಲಾಗಿದೆ

14 ಮಾಜಿ ಸೈನಿಕರಿಗಾಗಿ ಸೈನಿಕ ವಿಶ್ರಾಂತಿ ಗೃಹಗಳನ್ನು ಮತ್ತು ಅವರ ಮಕ್ಕಳಿಗಾಗಿ ಮಿಲಿಟರಿ ಬಾಲಕರ/ಬಾಲಕಿಯರ ವಸತಿ ನಿಲಯಗಳನ್ನು ನಡೆಸಲಾಗುತ್ತಿದೆ

15 ಸ್ಥಳೀಯ ಧನ ಸಹಾಯವನ್ನು ನೀಡಲಾಗುತ್ತಿದೆ

16 ವಾರ್ಷಿಕ ಧನ ಸಹಾಯವನ್ನು ನೀಡಲಾಗುತ್ತಿದೆ

17 ಮಾಜಿ ಸೈನಿಕರ ಹೆಣ್ಣು ಮಕ್ಕಳ ಮದುವೆಗೆ ಧನ ಸಹಾಯ

18 ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲು ಮಿಲಿಟರಿ ಬಾಲಕರ/ ಬಾಲಕಿಯರ ವಸತಿ ನಿಲಯಗಳಿಗೆ ಧನ ಸಹಾಯ

19 ಯುದ್ಧದಲ್ಲಿ/ಯುದ್ಧದಂತಹ ಕಾರ್ಯಾಚರಣೆಯಲ್ಲಿ ಮಡಿದ ಯೋಧರ ಅವಲಂಬಿತರಿಗೆ ಮನೆ ದುರಸ್ತಿ ಮಾಡಲು ಧನ ಸಹಾಯ

20 ಶ್ರವಣ ಯಂತ್ರ ಮತ್ತು ಕನ್ನಡಕವನ್ನು ಖರೀದಿಸಲು ಧನ ಸಹಾಯ

21 ವೈದ್ಯಕೀಯ ಚಿಕಿತ್ಸೆಗಾಗಿ ಧನ ಸಹಾಯ

22 ಮಾಜಿ ಸೈನಿಕರಿಗಾಗಿ ಮಂಗಳೂರಿನಲ್ಲಿ ಸೈನಿಕ ವಿಶ್ರಾಂತಿ ಗೃಹವನ್ನು ಕಟ್ಟುವ ಕಾರ್ಯ ಪ್ರಗತಿಯಲ್ಲಿದೆ

23 ವಿಜಾಪೂರದಲ್ಲಿ ಮಿಲಿಟರಿ ಬಾಲಕರ ವಿಶ್ರಾಂತಿ ಗೃಹವನ್ನು ಪ್ರಾರಂಭಿಸಲು ಯೋಚಿಸಲಾಗಿದೆ

149 ಶ್ರೀ ಅಶೋಕ ಗುರಪ್ಪ ಶಾಬಾದಿ ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೇವರಹಿಪ್ಪರಗಿ–ತಾಳಿಕೋಟೆ ರಸ್ತೆಯು ಅತ್ಯಂತ ದುಸ್ಥಿತಿಯಲ್ಲಿರುವುದರಿಂದ ವಾಹನಗಳ ಸಂಚಾರಕ್ಕೆ ತುಂಬಾ ಅಡಚಣೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಿದೆಯೇ,

ಆ) ಹಾಗಿದ್ದಲ್ಲಿ, ಸದರಿ ರಸ್ತೆಯನ್ನು ಸುಧಾರಿಸಲು ಕೈಗೊಂಡಿರುವ ಕ್ರಮವೇನು,

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಗಮನಕ್ಕೆ ಬಂದಿದೆ

ಆ) ಸದರಿ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು 47 00 ಕಿಮೀ ಉದ್ದವಿರುತ್ತದೆ 2005–06ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054 ರಡಿಯಲ್ಲಿ ಕಿಮೀ 1 40 ರಿಂದ 10 00 ರವರೆಗೆ ಮರುಡಾಂಬರೀಕರಣಕ್ಕಾಗಿ ರೂ 30 00 ಲಕ್ಷದ ಅಂದಾಜು ಮಂಜೂರಾಗಿದ್ದು, ಗುತ್ತಿಗೆಯನ್ನು ನಿಗದಿಪಡಿಸಿದ್ದು, ಕಾಮಗಾರಿಯನ್ನು ಮಾರ್ಚ್–07 ರೊಳಗಾಗಿ ಪೂರ್ಣಗೊಳಿಸಲಾಗುವುದು ಅಲ್ಲದೇ ಕಿಮೀ 10 00 ರಿಂದ 16 20 ವರೆಗೆ (ಪ್ರಸ್ತಾಪಿತ ಕಿಮೀ) 10 00 ರಿಂದ 12 00 ರ ಮತ್ತು 15 00 ರಿಂದ 15 75 ಸುಧಾರಣೆಗಾಗಿ 2006–07ನೇ ಸಾಲಿನ ಲೆಕ್ಕ ಶೀರ್ಷಿಕೆ 5054 ರಡಿಯಲ್ಲಿ ರೂ 25 00 ಲಕ್ಷದ ಅಂದಾಜು ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಅಲ್ಲದೆ ಸದರಿ ರಸ್ತೆಯ ವಾರ್ಷಿಕ ನಿರ್ವಹಣೆಗಾಗಿ ಪ್ರಸಕ್ತ ಸಾಲಿನಲ್ಲಿ ರೂ 10 30 ಲಕ್ಷದ